# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 259 | Pages. 2 | Date: 29-08-2025, FRIDAY RNI NO: KARKAN/2024/89601 Kannada Daily

ಸಂಪುಟ : 01 - ಸಂಚಿಕೆ : 259 - ಪುಟಗಳು : 2 29-08-2025 ಶುಕ್ರವಾರ Ph: 8762954248 ದರ : ₹1


## ಮೊಬೈಲ್ ಅಡವಿಟ್ಟಿದ್ದಕ್ಕೆ ಹೊಡೆದನೆಂದು ಕೊಂದೇ ಬಿಟ್ಟರು

## ಗಾಂಜಾ ಅಮಲಿನಲ್ಲಿ ಹತ್ಯೆ..!? | ಅಪ್ರಾಪ್ತರಿಂದ ಕೃತ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದಲ್ಲಿ ಗಾಂಜಾ, ಡ್ರಗ್ಸ್ ನಂತಹ ಅಮಲು ಪದಾರ್ಥಗಳ ಸೇವನೆ ಹೆಚ್ಚಾಗುತ್ತಲೇ ಇದ್ದು ಜೊತೆಗೆ ಅಪರಾಧ ಕೃತ್ಯಗಳು ಬೆಚ್ಚಿ ಬೀಳಿಸುತ್ತಿವೆ.

ಅಮಲಿನಲ್ಲಿ ಯುವಕರು ತಾವು ಏನು ಮಾಡುತ್ತಿದ್ದೇವೆಂಬ ಅರಿವು ಇಲ್ಲದೆ ಕಾನೂನು ಕೈಗೆತ್ತಿಕೊಳ್ಳುತ್ತಿದ್ದಾರೆ. ಅದಕ್ಕೆ ತಾಜಾ ನಿದರ್ಶನವೆಂಬಂತೆ ಕಾನೂನು



ಸಂಘರ್ಷಕ್ಕೊಳಗಾದ ಅಪ್ರಾಪ್ತರು ಯುವಕನೊಬ್ಬನನ್ನು ಮಚ್ಚಿನಿಂದ ಕೊಚ್ಚಿ ಹತ್ಯೆಗೈದಿದ್ದಾರೆ. ಸ್ನೇಹಿತನ ಮೊಬೈಲ್ ಕಸಿದು ಅಡಮಾನ ಇಟ್ಟಿದ್ದಕ್ಕೆ ಹೊಡೆದನೆಂಬ ಕಾರಣಕ್ಕೆ ಸ್ನೇಹಿತನನ್ನೇ ಮಚ್ಚಿನಿಂದ ಕೊಚ್ಚಿ ಕೊಲೆಗೈದಿದ್ದಾರೆ. ಈ ಘಟನೆ ತಾಲ್ಲೂಕಿನ ಯರೇಹಳ್ಳಿ ಹಳ್ಳದ ಸಮೀಪ ಆ. 26ರ ಮಂಗಳವಾರ ರಾತ್ರಿ ನಡೆದಿದೆ. ದೇವರಾಯಪಟ್ಟಣದ ಚಂದ್ರು ಅವರ ಪುತ್ರ ಸಿ. ಅಂಕಿತ್ (21) ಮೃತ ದುರ್ದೈವಿ.

ಕೊಲೆಗೈದವರು ಇಬ್ಬರು ಆರೋಪಿಗಳು ಅಪ್ರಾಪ್ತರಾಗಿದ್ದು, ಜೊತೆಗೆ ಮೂವರು ಸಹಕಾರ ನೀಡಿದ್ದಾರೆ ಎನ್ನಲಾಗಿದೆ. ವಿಚಾರ ಗೊತ್ತಾಗುತ್ತಿದ್ದಂತೆ ಸ್ಥಳಕ್ಕೆ ಭೇಟಿ ನೀಡಿದ್ದ ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದರು. ಒಟ್ಟು ಐವರನ್ನು ಬಂಧಿಸಿದ್ದಾರೆಂದು ತಿಳಿದುಬಂದಿದೆ.

ವಾರ್ಡ್ ರೂಬ್ ಸಹಾಯಕನಾಗಿ ಕೆಲಸ ಮಾಡಿಕೊಂಡಿದ್ದ ಅಂಕಿತ್ ಗಣೇಶೋತ್ಸವ ಹಿನ್ನೆಲೆಯಲ್ಲಿ ಕಳೆದ ನಾಲ್ಕು ದಿನಗಳಿಂದ ಕೆಲಸಕ್ಕೆ ರಜೆ ಹಾಕಿ ಮನೆಯಲ್ಲೇ ಇದ್ದ.

ಮೃತ ಅಂಕಿತ್‌ನ ಸ್ನೇಹಿತ ಹರ್ಷ ಎಂಬಾತನ ಮೊಬೈಲ್ ಅನ್ನು ಇಬ್ಬರು ಸ್ನೇಹಿತರು ಬಲವಂತವಾಗಿ ಕಸಿದುಕೊಂಡು ಅಡಮಾನ ಇಟ್ಟಿದ್ದರು. ಅದನ್ನು ಆತ ದುಡ್ಡು ಕೊಟ್ಟು ವಾಪಾಸ್ ಪಡೆದಿದ್ದ. ಈ ವಿಚಾರ ಅಂಕಿತ್‌ಗೆ ಗೊತ್ತಾಗಿ ಮಂಗಳವಾರ ಮಧ್ಯಾಹ್ನ ತಣ್ಣೀರುಹಳ್ಳದ ಬಾರ್‌ವೊಂದರ ಮುಂದೆ ಮೊಬೈಲ್ ಕಸಿದುಕೊಂಡಿದ್ದ ಒಬ್ಬಾತನಿಗೆ ಅಂಕಿತ್ ಹೊಡೆದಿದ್ದ ಎನ್ನಲಾಗಿದೆ.

ಅದೇ ದಿನ ಸಂಜೆ ಸ್ನೇಹಿತರು ನಿರಂತರವಾಗಿ ಕರೆ ಮಾಡುತ್ತಿದ್ದುದರಿಂದ ಗುಡ್ಡೇನಹಳ್ಳಿಯಲ್ಲಿ ಗಣಪತಿ ಕೂರಿಸುತ್ತಿದ್ದು, ಅಲ್ಲಿಗೆ ಹೋಗಿ ರಾತ್ರಿ 8 ಗಂಟೆಗೆ ಬರುತ್ತೇನೆಂದು ಕುಟುಂಬ ಸದಸ್ಯರಿಗೆ ಹೇಳಿ ಅಂಕಿತ್ ತೆರಳಿದ್ದ.



### ಪಾರ್ಟಿ ಹೆಸರಲ್ಲಿ ಕರೆಸಿಕೊಂಡರು

ಮಧ್ಯಾಹ್ನ ಸಾರ್ವಜನಿಕರ ಎದುರು ಹೊಡೆದನೆಂದು ಆಕ್ರೋಶಗೊಂಡಿದ್ದ ಇಬ್ಬರು ಅಂಕಿತ್‌ನ ಕೊಲೆಗೆ ಸಂಚು ರೂಪಿಸಿದ್ದರು. ಆತನನ್ನು ಹೇಗಾದರೂ ಮಾಡಿ ತಾವಿರುವಲ್ಲಿಗೆ ಕರೆಸಿಕೊಳ್ಳಬೇಕೆಂದು ಅಂಕಿತ್‌ಗೆ ಆಪ್ತರೆನಿಸಿಕೊಂಡವರಿಂದ ಕರೆ ಮಾಡಿಸಿದ್ದರು. ಯರೇಹಳ್ಳಿಯಲ್ಲಿ ಮದ್ಯ ಸೇವನೆಗೆ ಹೋಗೋಣವೆಂದು ಆತನನ್ನು ಕರೆಸಿಕೊಂಡಿದ್ದರು. ಎಲ್ಲರೂ ಸ್ನೇಹಿತರೇ ಅಲ್ವಾ, ಸಣ್ಣಪುಟ್ಟದ್ದು ಇರುತ್ತೆ ಎಂದುಕೊಂಡು ಅಂಕಿತ್ ಬೈಕ್‌ನಲ್ಲಿ ಒಬ್ಬನೇ ಅಲ್ಲಿಗೆ ತೆರಳಿದ್ದ. ಸ್ನೇಹಿತರ ಮಾತು ನಂಬಿ ಯರೇಹಳ್ಳಿ ಬಳಿ ಅಂಕಿತ್ ಬೈಕ್‌ನಿಂದ ಕೆಳಗಿಳಿಯುತ್ತಿದ್ದಂತೆ ಏಕಾಏಕಿ ದಾಳಿ ನಡೆಸಿ ಮಚ್ಚಿನಿಂದ ಹತ್ಯೆಗೈದು ಪರಾರಿಯಾಗಿದ್ದರು. ಹತ್ಯೆಗೀಡಾದ ಅಂಕಿತ್ ಹಾಗೂ ಆರೋಪಿಗಳೆಲ್ಲರೂ ಗಾಂಜಾ ವ್ಯಸನಿಗಳಾಗಿದ್ದರೆಂದು ತಿಳಿದುಬಂದಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜೈಲು ಪಾಲಾದ ರೌಡಿ ಶೀಟರ್ ಚೇತು

ಚನ್ನರಾಯಪಟ್ಟಣ: ರೌಡಿ ಶೀಟರ್ ಕೊಲೆಗೆ ಸಂಚು ರೂಪಿಸಿದ ಆರೋಪದ ಹಿನ್ನೆಲೆಯಲ್ಲಿ ಕುಖ್ಯಾತ ರೌಡಿ ಶೀಟರ್ ಯಾಚೇನಹಳ್ಳಿ ಚೇತು ಅಲಿಯಾಸ್ ಚೇತನ್ ಮತ್ತೆ ಜೈಲು ಪಾಲಾಗಿದ್ದಾನೆ.

ತಾಲ್ಲೂಕಿನ ಮತ್ತೊಬ್ಬ ರೌಡಿ ಶೀಟರ್ ಮಾಸ್ತಿ ಕೊಲೆ ಪ್ರಕರಣದಲ್ಲಿ ಈತನ ವಿರುದ್ಧ ಗುಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು.

ಅದೇ ಪ್ರಕರಣದಲ್ಲಿ ಚೇತನ್ ಮತ್ತು ಇತರೆ 9 ಆರೋಪಿಗಳ ವಿರುದ್ಧ ಪಟ್ಟಣದ ನಾಲ್ಕನೇ ಸೆಷನ್ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿತ್ತು. ಅದಲ್ಲದೇ ಹಿಂದೆ ಹಲವಾರು ಕೊಲೆ, ಸುಲಿಗೆ ಪ್ರಕರಣಗಳಲ್ಲಿ ಈತ



ಮೊದಲೇ ಜೈಲು ಸೇರಿದ್ದ.

ಜೀವಾವಧಿ ಶಿಕ್ಷೆ ಪ್ರಶ್ನಿಸಿ ಚೇತು, ತನ್ನ ವಕೀಲರ ಮೂಲಕ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದ. ಅದನ್ನು ಮಾನ್ಯ ಮಾಡಿದ ನ್ಯಾಯಪೀಠ, ಜೀವಾವಧಿ ಶಿಕ್ಷೆಯನ್ನು ಅಮಾನತ್ತಿನಲ್ಲಿಟ್ಟು ಜಾಮೀನು ನೀಡಿತ್ತು. ಹೈಕೋರ್ಟ್ ಆದೇಶದ ವಿರುದ್ಧ ಚನ್ನರಾಯಪಟ್ಟಣ ಪೊಲೀಸರು ಹಾಗು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಎಸ್‌ಎಲ್‌ಪಿ ಅರ್ಜಿ ಸಲ್ಲಿಸಿದ್ದರು.

ಈತ ಜೈಲಿನಲ್ಲಿದ್ದುಕೊಂಡೇ ಮಾಸ್ತಿ ಕೊಲೆಗೆ ಸಂಚು ರೂಪಿಸಿರುವುದು ಸಾಕ್ಷ್ಯಾಧಾರಗಳಿಂದ ಸಾಬೀತಾಗಿರುವುದರಿಂದ ಕೂಡಲೇ ಚೇತುಗೆ ನೀಡಿದ್ದ ಜಾಮೀನನ್ನು ವಜಾ ಮಾಡಿ, ಏಳು ದಿನಗಳ ಒಳಗೆ ಶರಣಾಗುವಂತೆ ನ್ಯಾಯಾಲಯ ಸೂಚನೆ ನೀಡಿತ್ತು. ಈ ಕಾರಣಕ್ಕಾಗಿ ಹಾಸನದ ಜೈಲು ಅಧಿಕಾರಿಗಳ ಮುಂದೆ ಚೇತು ಶರಣಾಗಿದ್ದಾನೆ.

## ಸುಟ್ಟು ಕರಕಲಾದ ಸ್ಥಿತಿಯಲ್ಲಿ ಶವ ಪತ್ತೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಶ್ರವಣಬೆಳಗೊಳದ ಹೊರವಲಯದ ಜಿನ್ನಾಥಪುರ ರಸ್ತೆಯಲ್ಲಿರುವ ಸ್ಮಶಾನದಲ್ಲಿ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಅಪರಿಚಿತ ಶವ ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

ದುಷ್ಕರ್ಮಿಗಳು ಬೇರೆಡೆ ವ್ಯಕ್ತಿಯನ್ನು ಕೊಲೆ ಮಾಡಿ ಬೆಂಕಿ ಹಚ್ಚಿ ಸುಡಲು ಯತ್ನಿಸಿದ್ದು ಮೃತ ದೇಹವು ಸಂಪೂರ್ಣ ಸುಡದಿದ್ದಾಗ ಉಳಿದ ಅಸ್ಥಿಯನ್ನು ಗೊಬ್ಬರದ ಚೀಲದಲ್ಲಿ ತುಂಬಿಕೊಂಡು ಇಲ್ಲಿಯ ಸ್ಮಶಾನಕ್ಕೆ ಎಸೆದಿದ್ದಾರೆ ಎನ್ನಲಾಗಿದೆ.

ಗುರುವಾರ ಬೆಳಿಗ್ಗೆ ದನ ಮೇಯಿಸಲು ಬಂದ ವ್ಯಕ್ತಿ ಸುಟ್ಟು ಕರಕಲಾದ ಮೃತ ದೇಹವನ್ನು ನೋಡಿ ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತ, ಅಪರ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಸರ್ಕಲ್ ಇನ್ಸಪೆಕ್ಟರ್ ಸಂತೋಷ್, ಪಿಎಸ್ಐ ನವೀನ್ ಭೇಟಿ ನೀಡಿದರು. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಚನ್ನರಾಯಪಟ್ಟಣ: ಜಿಲ್ಲಾ ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ 4ನೇ ಬಾರಿಗೆ ಅವಿರೋಧ ಆಯ್ಕೆಯಾದ ಶ್ರವಣಬೆಳಗೊಳ ಕ್ಷೇತ್ರ ಶಾಸಕ ಸಿ.ಎನ್. ಬಾಲಕೃಷ್ಣ ಅವರಿಗೆ ಚನ್ನರಾಯಪಟ್ಟಣ ತಾಲ್ಲೂಕು ಶ್ರೀನಿವಾಸಪುರ ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ ವತಿಯಿಂದ ಗುರುವಾರ ಅಭಿನಂದಿಸಲಾಯಿತು. ಅಧ್ಯಕ್ಷ ವೆಂಕಟೇಶ್, ಮಾಜಿ ಅಧ್ಯಕ್ಷ ತೋಟಿ ಜಯರಾಂ, ನಿರ್ದೇಶಕರು ಹಾಗೂ ಇತರರು ಇದ್ದರು.

## ಅಸಮರ್ಪಕ ತ್ಯಾಜ್ಯ ವಿಲೇವಾರಿ: ಕರವೇ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪಟ್ಟಣದ ಜಾತ್ರಾ ಮೈದಾನದಲ್ಲಿ ಪುರಸಭೆಯ ಘನ ತ್ಯಾಜ್ಯ ಹಾಕಬಾರದು ಹಾಗೂ ಈಗಾಗಲೇ ಹಾಕಿರುವ ಘನ ತ್ಯಾಜ್ಯವನ್ನು ಸ್ಥಳಾಂತರಿಸಬೇಕೆಂದು ಒತ್ತಾಯಿಸಿ ಪಟ್ಟಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ನೇತೃತ್ವದಲ್ಲಿ ಗ್ಯಾರೇಜ್ ಮಾಲೀಕರು ಮತ್ತು ಕಾರ್ಮಿಕರು ಗುರುವಾರ ಪ್ರತಿಭಟನೆ ನಡೆಸಿದರು.

ಕರವೇ ಜಿಲ್ಲಾಧ್ಯಕ್ಷ ಸತೀಶ್ ಪಟೇಲ್ ಮಾತನಾಡಿ, ಕಸ ತೆರವುಗೊಳಿಸಲು ನೀಡಿದ್ದ ಗಡುವು ಮುಗಿದಿದೆ. ಪುರಸಭೆಯವರು ಜಾತ್ರಾ ಮೈದಾನದಲ್ಲಿ 10 ವರ್ಷಗಳಿಂದ ಪುರಸಭೆ ತ್ಯಾಜ್ಯ ಹಾಕುತ್ತಿದೆ. ಅದರಿಂದ ಮೈದಾನದ ಸುತ್ತಲಿನ ವಿವಿಧ ಗ್ಯಾರೇಜ್‌ಗಳ ಕಾರ್ಮಿಕರು ಹಾಗು ನಿವಾಸಿಗಳು ದುರ್ನಾತದಲ್ಲೇ ಕೆಲಸ ಮಾಡುವಂತಾಗಿದೆ. ಮಳಲಿ



ಗ್ರಾಮದಲ್ಲಿ ಪುರಸಭೆಯ ಘನತ್ಯಾಜ್ಯ ವಿಲೇವಾರಿ ಘಟಕದ ಕಾಮಗಾರಿ ಇನ್ನು ಮುಗಿಯದಿರುವುದರಿಂದ ಕಸವನ್ನು ಅಲ್ಲಿ ಹಾಕಲು ಸಾಧ್ಯವಿಲ್ಲ. ಪುರಸಭೆಯವರು ಕಸವನ್ನು ಜಾತ್ರಾ ಮೈದಾನದಲ್ಲೇ ಹಾಕುತ್ತಿದ್ದಾರೆ. ಇನ್ನು ಎಷ್ಟು ವರ್ಷ ಬಡ ಕಾರ್ಮಿಕರು ದುರ್ನಾತದಲ್ಲಿ ಕಾಯಿಲೆಗಳಿಗೆ ತುತ್ತಾಗಿ ಜೀವನ ಮಾಡಬೇಕು. ಯಾವ ಕಾರಣಕ್ಕೂ ಇಲ್ಲಿ ಕಸ ಹಾಕಲು ಬಿಡುವುದಿಲ್ಲ. ಪುರಸಭೆಯವರು ಕಸದ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. ಇಲ್ಲವಾದರೆ ಪಟ್ಟಣ ಬಂದ್ ಮೂಲಕ ಪ್ರತಿಭಟಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕಾರ್ಮಿಕರ ಸಂಘದ ಮುಖಂಡ ಚಿದಾನಂದ್ ಮಾತನಾಡಿ, ಕಸದ ರಾಶಿಯ ಸಮೀಪವೇ ಹಿಂದು ರುದ್ರಭೂಮಿ ಹಾಗೂ ಕ್ರೀಡಾಂಗಣವಿದೆ. ಯಾರಾದರೂ ಮೃತಪಟ್ಟಾಗ ಅಂತ್ಯಕ್ರಿಯೆಗಾಗಿ ಶವ ತೆಗೆದುಕೊಂಡು ಹೋಗುವಾಗಲೂ ಮೂಗು ಮುಚ್ಚಿಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ. ಸತ್ತವರಿಗೂ ನೆಮ್ಮದಿಯಿಲ್ಲ ಬದುಕಿರುವವರಿಗೂ ನೆಮ್ಮದಿಯಿಲ್ಲದಂತಾಗಿದೆ. ಪುರಸಭೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಪಟ್ಟಣದ 23 ವಾರ್ಡ್‌ಗಳ ಕಸವನ್ನು ಕಳೆದ 10 ವರ್ಷಗಳಿಂದ ಇಲ್ಲೇ ಹಾಕಲಾಗುತ್ತಿದ್ದು ಇದೇ ರೀತಿ ಮುಂದುವರಿದರೆ ಪಟ್ಟಣ ಬಂದ್ ಮಾಡಿ ಹೋರಾಟ ಮಾಡಲಾಗುತ್ತದೆ ಎಂದರು.

ಕರವೇ ತಾಲ್ಲೂಕು ಅಧ್ಯಕ್ಷ ರಮೇಶ್ ಪೂಜಾರಿ, ಉಮೇಶ್, ಲೀಯಾ ಫರ್ನಾಂಡಿಸ್, ಹರೀಶ್, ಶರಣ್, ಸುದೀಪ್, ವಜೀರ್, ಉಮರ್, ಇಬ್ರಾಹಿಂ, ಗ್ಯಾರೇಜ್ ಮಾಲೀಕರು ಹಾಗು ಕಾರ್ಮಿಕರ ಸಂಘದ ಗೋವಿಂದ ಸ್ವಾಮಿನಾಯ್ಡು, ದೇವರಾಜು, ಅನ್ಸರ್, ಯೂಸಫ್ ಹಾಜರಿದ್ದರು.


## ಪೆಂಡಾಲ್ ಗಣಪತಿಗೆ ಪೂಜೆ ಸಲ್ಲಿಸಿದ ಶಾಸಕ ಬಾಲಕೃಷ್ಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ವಿನಾಯಕನನ್ನು ಭಕ್ತಿ-ಭಾವದಿಂದ ಪೂಜಿಸಿದರೆ ಬದುಕಿನಲ್ಲಿ ಯಾವುದೇ ವಿಘ್ನಗಳು ಬರುವುದಿಲ್ಲ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಪಟ್ಟಣದ ಗಣಪತಿ ಪೆಂಡಾಲ್ ನಲ್ಲಿ ಗಣೇಶ ಚತುರ್ಥಿಯಂದು ಪ್ರತಿಷ್ಠಾಪಿಸಿದ ಶ್ರೀ ಗೌರಿ ಹಾಗೂ ಪ್ರಸನ್ನ ಗಣಪತಿ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿ, ಯಾವುದೇ ಕಾರ್ಯಕ್ರಮವಿರಲಿ ಮೊದಲು ವಿಘ್ನೇಶ್ವರನಿಗೆ ಪೂಜೆ ಸಲ್ಲಿಸುವುದು ಹಿಂದು ಧರ್ಮದ ಪದ್ಧತಿ ಎಂದರು.

ಎಷ್ಟೇ ಹಣ, ಆಸ್ತಿ ಸಂಪಾದಿಸಿದರೂ ಸಹ ಬದುಕಿನಲ್ಲಿ ನೆಮ್ಮದಿ ಮುಖ್ಯ. ಅದು ದಾನ, ಧರ್ಮ ಹಾಗೂ ಧಾರ್ಮಿಕ ಕಾರ್ಯಗಳಿಂದ ಮಾತ್ರ ಸಿಗಲು ಸಾಧ್ಯವಿದೆ. ದುಡಿಮೆಯ ಶೇ.15 ರಷ್ಟು ಭಾಗವನ್ನು ಧರ್ಮ ಕಾರ್ಯಗಳಿಗೆ ಬಳಕೆ



ಮಾಡುವುದು ಅಗತ್ಯ ಎಂದು ತಿಳಿಸಿದರು.

ಗುರು-ಹಿರಿಯರು ಹಾಗೂ ಹೆತ್ತವರಿಗೆ ಗೌರವ ನೀಡುವುದು ನಮ್ಮ ಸಂಸ್ಕೃತಿಯ ಒಂದು ಭಾಗವಾಗಿದೆ. ಆಧುನಿಕ ಜಗತ್ತು ಅತಿ ವೇಗದಲ್ಲಿ ಸಾಗುತಿದ್ದು ಶಿಕ್ಷಣ ವ್ಯವಸ್ಥೆಯೊಂದಿಗೆ ಸಮಾಜ ಸುಧಾರಣೆ ಕಾಣುತ್ತಿದೆ. ಆದರೆ ಜೀವನ ಶೈಲಿಯ ಬದಲಾವಣೆ ಬರದಲ್ಲಿ ಅದೆಷ್ಟೋ ಮಂದಿ ಹೆತ್ತವರು ವೃದ್ಧಾಶ್ರಮ ಸೇರುತ್ತಿರುವುದು ದುಃಖಕರ ಸಂಗತಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ವಯೋವೃದ್ಧರ ಸೇವೆಯೇ ನಿಜವಾದ ದೇವರ ಸೇವೆಯಾಗಿದೆ. ಅವರ ಸೇವೆ ಮಾಡುವ ಮೂಲಕ ದೇವರನ್ನು ಕಾಣಬೇಕು.

ಶಿಕ್ಷಣ ಬದುಕಿನ ಬದಲಾವಣೆಗಷ್ಟೇ ಅಲ್ಲ ಅರಿವಿನ ಜ್ಞಾನದ ಬುತ್ತಿಯಾಗಬೇಕು. ಶಿಕ್ಷಣ ಹೆಚ್ಚಿದಂತೆಲ್ಲ ಅನಾಥ ಹಾಗೂ ವೃದ್ಧಾಶ್ರಮಗಳು ಮುಚ್ಚಬೇಕು ಹೊರತು ತೆರೆಯಬಾರದು. ಇಲ್ಲವಾದಲ್ಲಿ ಮುಂದೊಂದು ದಿನ ನಾವು ಸಹ ಅದೇ ಜಾಗ ಸೇರಬೇಕಾದ ಸಮಯ ಮರುಕಳಿಸಲಿದೆ ಎಂದು ಎಚ್ಚರಿಸಿದರು.

ಪುರಸಭೆ ಅಧ್ಯಕ್ಷ ಕೋಟೆ ಮೋಹನ್, ಮಾಜಿ ಅಧ್ಯಕ್ಷೆ ಬನಶಂಕರಿ ರಘು, ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ವೆಂಕಟೇಶ್, ಮಾಜಿ ಅಧ್ಯಕ್ಷ ತೋಟಿ ಜಯರಾಂ, ನಗರಾಭಿವೃದ್ಧಿ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿ ಆನಂದ್, ಪರಿಸರ ಪ್ರೇಮಿ ಸಿ.ಎನ್.ಅಶೋಕ್, ಪ್ರಮುಖರಾದ ಕೆರೆಬೀದಿ ಜಗದೀಶ್, ಕುಮಾರ್, ಮೋಹನ್, ಪ್ರಸನ್ನ ಗಣಪತಿ ಸೇವಾ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ಇತರರು ಇದ್ದರು.

ತಾಲ್ಲೂಕಿನಾದ್ಯಂತ ಪ್ರತಿಷ್ಠಾಪನೆ: ಪಟ್ಟಣ ಸೇರಿದಂತೆ ಹಿರೀಸಾವೆ, ಶ್ರವಣಬೆಳಗೊಳ, ನುಗ್ಗೇಹಳ್ಳಿ, ಬಾಗೂರು ಹೋಬಳಿ ವ್ಯಾಪ್ತಿಯ ಎಲ್ಲ ಗ್ರಾಮಗಳಲ್ಲಿಯೂ ಗಣೇಶ ಚತುರ್ಥಿಯಂದು ಶ್ರೀ ಗೌರಿ ಹಾಗೂ ಗಣೇಶ ಮೂರ್ತಿಯನ್ನು ವಿಶೇಷ ಅಲಂಕೃತ ಮಂಟಪಗಳಲ್ಲಿ ಪ್ರತಿಷ್ಠಾಪಿಸಿದ್ದು, ಹಣ್ಣು-ಹಂಪಲಗಳು, ಕಡುಬು, ಮೋದಕ, ಕರಂಜಿಕಾಯಿ ಹಾಗೂ ವಿವಿಧ ಬಗೆಯ ಸಿಹಿ ತಿನಿಸು ನೇವೇದ್ಯ ಸಮರ್ಪಿಸಲಾಯಿತು.

## ಪೌರ ಕಾರ್ಮಿಕ ಮಹಿಳೆಯರಿಗೆ ಬಾಗಿನ ಅರ್ಪಣೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ನಮ್ಮ ಮನೆಯ ಹೆಣ್ಣು ಮಕ್ಕಳಿಗೆ ಅರಿಶಿನ-ಕುಂಕುಮ ಹಾಗೂ ಬಾಗಿನ ನೀಡುವುದು ಗೌರಿ ಹಬ್ಬದ ವಿಶೇಷ. ಅದು ಹಿಂದು ಧರ್ಮದ ಸಂಪ್ರದಾಯ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮ ಬಾಲಕೃಷ್ಣ ಹೇಳಿದರು.

ಪಟ್ಟಣದ ಅವರ ನಿವಾಸದಲ್ಲಿ ಶ್ರೀ ಗಣೇಶ ಚತುರ್ಥಿ ಹಾಗೂ ಗೌರಿ ಹಬ್ಬದ ಪ್ರಯುಕ್ತ ಪುರಸಭೆ ಪೌರಕಾರ್ಮಿಕ ಮಹಿಳೆಯರಿಗೆ ಬಾಗಿನ ನೀಡಿ ಗೌರವಿಸಿ ಮಾತನಾಡಿದ ಅವರು, ಹೆಣ್ಣು ಮಕ್ಕಳು ಎಂದರೆ ಮನೆಯ ಲಕ್ಷ್ಮಿಯರಿದ್ದಂತೆ ಎಂದರು.

ತವರು ಮನೆಯಿಂದ ಅದೆಷ್ಟೇ ಖರ್ಚು ಮಾಡಿ ಮದುವೆ ಮಾಡಿಕೊಟ್ಟಿದ್ದರೂ ಸಹ ಗೌರಿ ಹಬ್ಬದ ದಿನ ತವರು ಮನೆಯಿಂದ ಬರುವ ಬಾಗಿನಕ್ಕೆ ಹೆಣ್ಣು ಮಕ್ಕಳು ಕಾಯುವುದು ವಿಶೇಷ. ಸಹೋದರ ಸಂಬಂದವನ್ನು ಬೆಸೆದು ಬೆಳೆಸುವ ತವರು ಮನೆಯ ಬಾಗಿನಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಸಂತಸ ವ್ಯಕ್ತಪಡಿಸಿದರು.

ಪಟ್ಟಣದ ಸ್ವಚ್ಛತೆಯಲ್ಲಿ ಸದಾ ತೊಡಗುವ ಪೌರಕಾರ್ಮಿಕ ಮಹಿಳೆಯರು ಯಾರಿಂದಲೂ ಏನನ್ನೂ ಬಯಸದೆ ಸ್ವಾಭಿಮಾನದಿಂದ ಬದುಕು ಕಟ್ಟಿಕೊಂಡಿದ್ದಾರೆ. ಇವರ ಸೇವೆ ಅನನ್ಯವಾದುದು. ಪ್ರತಿ ಹೆಣ್ಣು ಮಕ್ಕಳು ನಮ್ಮ ಮನೆಯ ಮಕ್ಕಳು ಎಂದು ಶ್ಲಾಘಿಸಿದರು. ಎಲ್ಲ ಪೌರಕಾರ್ಮಿಕ ಮಹಿಳೆಯರಿಗೆ ಬಾಗಿನ ಅರ್ಪಿಸಿ, ಉಡುಗೊರೆ ನೀಡಿ ಅಭಿನಂದಿಸಿದರು. ಶಾಸಕ ಸಿ.ಎನ್.ಬಾಲಕೃಷ್ಣ, ಪುತ್ರ ಜೈದೀಪ್ ಗೌಡ, ಪುತ್ರಿ ನಕ್ಷತ್ರ, ಬಾಲು, ಕುಟುಂಬ ವರ್ಗ ಹಾಗೂ ಇತರರು ಇದ್ದರು.

## ಶ್ರದ್ಧಾ ಭಕ್ತಿಯಿಂದ ವಿಘ್ನ ನಿವಾರಕ ಗಣೇಶನಿಗೆ ಸ್ವಾಗತ

### ಕಸಾಪ ಆವರಣದಲ್ಲಿ ಪಾಂಚಜನ್ಯ ಗಣಪ | ಪೆಂಡಾಲ್ ಗಣಪತಿಗೆ ವಿಶೇಷ ಪೂಜೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಿಘ್ನ ನಿವಾರಕ ಗಣೇಶನನ್ನು ನಗರ ಸೇರಿದಂತೆ ಜಿಲ್ಲಾದ್ಯಂತ ಸಡಗರ ಸಂಭ್ರಮದಿಂದ ಬರಮಾಡಿಕೊಳ್ಳಲಾಯಿತು.

ಪ್ರತಿವರ್ಷ ಹಾಸನಾಂಬ ಕಲಾಕ್ಷೇತ್ರ ಆವರಣದಲ್ಲಿ ಪ್ರತಿಷ್ಠಾಪನೆಯಾಗುತ್ತಿದ್ದ ಪಾಂಚಜನ್ಯ ಗಣಪತಿಯನ್ನು ಕಟ್ಟಡ ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಇಡಲಾಗಿದೆ. ರಸ್ತೆಯುದ್ದಕ್ಕೂ ಕೇಸರಿ ಬಾವುಟ ಹಾಗು ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳ ಅಳವಡಿಸಿದ್ದು ಜಿಲ್ಲಾ ಕಸಾಪ ಆವರಣ ಸಂಪೂರ್ಣ ಕೇಸರಿಮಯವಾಗಿದೆ. ಸಾರ್ವಜನಿಕ ದರ್ಶನಕ್ಕೆ ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗಿದೆ.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ನಾಡಿನ ಎಲ್ಲರಿಗೂ ಗಣೇಶ ಒಳ್ಳೆಯದನ್ನು ಮಾಡಲಿ. ಉತ್ತಮ ಮಳೆ ಬೆಳೆಯಿಂದ ಸಮೃದ್ಧಿ ನೆಲೆಸಲೆಂದು ಪ್ರಾರ್ಥಿಸಿರುವುದಾಗಿ ಹೇಳಿದರು. ಪಾಂಚಜನ್ಯ ಹಿಂದೂ ಗಣಪತಿ ಸಮಿತಿ ಗೌರವಾಧ್ಯಕ್ಷ ದಯಾನಂದ್ ಮಾತನಾಡಿ, ಸೆ. 3ರ ವರೆಗೆ ಪಾಂಚಜನ್ಯ ಗಣಪತಿ ವೀಕ್ಷಣೆಗೆ ಅವಕಾಶವಿದೆ. ನಮ್ಮ ಗಣಪತಿ ಪರಿಸರ ಸ್ನೇಹಿಯಾಗಿದ್ದು, ಇಡೀ ವಿಶ್ವದಲ್ಲಿ ಶಾಂತಿ, ನೆಮ್ಮದಿ ಸಕಲ ಸಂಪನ್ನಗಳೊಂದಿಗೆ ಉತ್ತಮವಾಗಿರಲೆಂದು ಗಣಪತಿ ಬಳಿ ಪ್ರಾರ್ಥಿಸಿರುವುದಾಗಿ ಹೇಳಿದರು. ಸೆ. 3ರ ಮಧ್ಯಾಹ್ನ 2 ಗಂಟೆಗೆ ಬೃಹತ್ ಶೋಭಯಾತ್ರೆ ಆರಂಭಗೊಂಡು ನಗರಾದ್ಯಂತ ಪ್ರಮುಖ ಬೀದಿಗಳಲ್ಲಿ ಸಾಗಲಿದೆ. ವಿಸರ್ಜನಾ ಮಹೋತ್ಸವಕ್ಕೆ ಜಿಲ್ಲೆಯ ವಿವಿಧ ಭಾಗದಿಂದ ಹಿಂದೂ ಕಾರ್ಯಕರ್ತರು ಪಾಲ್ಗೊಳ್ಳುತ್ತಾರೆಂದರು.

ಬೇಲೂರು ಶಾಸಕ ಹೆಚ್.ಕೆ. ಸುರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಹುಡಾ ಮಾಜಿ ಅಧ್ಯಕ್ಷ ನವಿಲೆ ಅಣ್ಣಪ್ಪ, ಪಾಂಚಜನ್ಯ ಹಿಂದು ಗಣಪತಿ ಸಮಿತಿ ಅಧ್ಯಕ್ಷ ವಾಸು, ಕಾರ್ಯದರ್ಶಿ ವೇಣುಗೋಪಾಲ್, ವಿಜಯ್ ಕುಮಾರ್ ನಾರ್ವೆ, ಹಿಂದು ಜಾಗರಣ ವೇದಿಕೆಯ ಲೋಕೇಶ್, ವಿಶ್ವ ಹಿಂದೂ ಪರಿಷತ್ ವಿಭಾಗೀಯ



ಕಾರ್ಯದರ್ಶಿ ಮಹಿಪಾಲ್, ಕಂಚಮಾರನಹಳ್ಳಿ ಕಾಂತಣ್ಣ, ಅಖಿಲ ಭಾರತ ವೀರಶೈವ ಲಿಂಗಾಯತ ಸಮಿತಿ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಸಮಿತಿಯ ಮೋಹನ್, ಮಹೇಶ್, ಲಾವಣ್ಯ, ಶ್ವೇತಾ, ಅನಿತಾ ಮತ್ತಿತರರಿದ್ದರು.

### ಶಾಸಕ ಸ್ವರೂಪ್ ಭಾಗಿ

ನಗರ ಸಾರಿಗೆ ಬಸ್ ನಿಲ್ದಾಣ ಸಮೀಪ 71ನೇ ವರ್ಷದ ಪೆಂಡಾಲ್ ಗಣಪತಿ ಮೂರ್ತಿ ಪ್ರತಿಷ್ಠಾಪನೆಯನ್ನು ಬುಧವಾರ ಮಧ್ಯಾಹ್ನ 12.35ಕ್ಕೆ ಪ್ರತಿಷ್ಠಾಪನಾ ಸಮಾರಂಭಕ್ಕೆ ಮಹಾಮಂಗಳಾರತಿಯೊಂದಿಗೆ ಅದ್ದೂರಿ ಚಾಲನೆ ಸಿಕ್ಕಿತು.

ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಶ್ರೀ ಗಣೇಶ ಎಲ್ಲರಿಗೂ ಆರೋಗ್ಯ, ಆಯಸ್ಸು ನೀಡಿ ಕಾಪಾಡಲಿ. ಮಳೆ, ಬೆಳೆ, ಸುಖ, ಶಾಂತಿಯನ್ನು ಜನತೆಗೆ ಕೊಡಲೆಂದು ದೇವರಲ್ಲಿ ಪ್ರಾರ್ಥಿಸಿದ್ದೇನೆಂದರು. 24 ದಿನಗಳ ಕಾಲ ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದೆ. ಸಾರ್ವಜನಿಕರು ಪ್ರತಿದಿನ ಆಗಮಿಸಿ ಈ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು. ಶ್ರೀ ಗಣಪತಿ ಸೇವಾ ಸಮಿತಿ ಅಧ್ಯಕ್ಷ ಡಾ. ಹೆಚ್. ನಾಗರಾಜು ಮಾತನಾಡಿ, ಸೆ. 19ರ ವರೆಗೆ ಗಣೇಶನಿಗೆ ವಿಶೇಷ ಪೂಜೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಲಿದೆ. ಪ್ರತಿದಿನ ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ ಬಳಿಕ ಪ್ರಸಾದ ವಿನಿಯೋಗ ಇರುತ್ತದೆ. ಹೆಣ್ಣು ಮಕ್ಕಳಿಗೆ ರಂಗೋಲಿ ಸ್ಪರ್ಧೆ, ವಿವಿಧ ಸಾಂಸ್ಕೃತಿಕ ಚಟುವಟಿಕೆ, ವೇಷಭೂಷಣ ಸ್ಪರ್ಧೆ, ಸಂಗೀತ, ನಾಟಕ, ಜನಪದ ಗೀತೆ, ಭಜನೆ ಕಾರ್ಯಕ್ರಮ ಸೇರಿದಂತೆ ವಿವಿಧ ಕಲೆಗಳ ಪ್ರದರ್ಶನ ಮಾಡಿ ಉತ್ತಮ ಪ್ರದರ್ಶನಕ್ಕೆ ಬಹುಮಾನ ವಿತರಣೆ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಸೆ. 19 ರಂದು ಮಹಾಗಣಪತಿಯ ಮತ್ತು ಸ್ವರ್ಣ ಗೌರಿ ಉತ್ಸವ ನಡೆಯಲಿದೆ. ಸಾಂಸ್ಕೃತಿಕ, ಜಾನಪದ ಕಲಾತಂಡಗಳೊಂದಿಗೆ ಪ್ರತಿವರ್ಷದಂತೆ ಪ್ರಮುಖ ರಾಜ ಬೀದಿಗಳಲ್ಲಿ ಸಂಚರಿಸಿ ಸಂಜೆ 6.30ಕ್ಕೆ ದೇವಿಗೆರೆ ತಲುಪಲಿದೆ. ರಾತ್ರಿ 8 ಗಂಟೆಗೆ ದೇವಿಗೆರೆಯಲ್ಲಿ ತೆಪ್ಪೋತ್ಸವದೊಂದಿಗೆ ವಿಸರ್ಜಿಸಲಾಗುತ್ತದೆ.



ಸೆ. 23ರ ರಂದು ಮಧ್ಯಾಹ್ನ12.30ಕ್ಕೆ ಮಹಾಗಣಪತಿ ಮಹೋತ್ಸವದ ಅಂಗವಾಗಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮಹಾ ನಗರ ಪಾಲಿಕೆ ಪ್ರಭಾರ ಮೇಯರ್ ಹೇಮಾಲತಾ ಕಮಾಲ್ ಕುಮಾರ್, ಗಣಪತಿ ಸೇವಾ ಸಮಿತಿ ಕಾರ್ಯದರ್ಶಿ ಚನ್ನವೀರಪ್ಪ, ಹೆಚ್.ಎಂ. ಸುರೇಶ್, ಲೀಲಾಕುಮಾರ್, ವೈ.ಎಸ್. ಮುರುಗೇಂದ್ರ, ಹೆಚ್.ಟಿ. ಶೇಖರ್, ಗಿರೀಶ್ ಚನ್ನವೀರಪ್ಪ, ಹೆಚ್.ಎಸ್. ಅನಂತನಾರಾಯಣ, ಎನ್.ಎಸ್. ಶಂಕರರಾವ್, ರವಿ ನಾಕಲಗೂಡು ಇತರರಿದ್ದರು.

# ಇಬ್ಬಡಿ ಬೋರೆ ಸಂಪರ್ಕ ರಸ್ತೆ ಕೆಸರುಮಯ

## ಪ್ರಾಣ ಭಯದಲ್ಲೇ ವಾಹನ ಓಡಿಸುವ ಸವಾರರು | ಗಮನ ಹರಿಸದ ಅಧಿಕಾರಿಗಳು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ತಾಲ್ಲೂಕಿನ ದೊಡ್ಡಮಗ್ಗೆ ಹೋಬಳಿ ದುಮ್ಮಿ ಕಾವಲು ಮಾರ್ಗವಾಗಿ ಇಬ್ಬಡಿ ಬೋರೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಮಳೆಯಿಂದ ಸಂಪೂರ್ಣವಾಗಿ ಕೆಸರುಮಯವಾಗಿದ್ದು, ನಿತ್ಯ ಸಂಚಾರ ಮಾಡುವ ಜನರು ನರಕಯಾತನೆ ಅನುಭವಿಸುವಂತಾಗಿದೆ.

ಕಳೆದ ಮೂರು ತಿಂಗಳಿಂದಲೂ ನಿರಂತರವಾಗಿ ಸುರಿಯುತ್ತಿರುವ ಮಳೆ ಪರಿಣಾಮ ಮೂರು ಕಿ.ಮೀ. ದೂರವಿರುವ ದುಮ್ಮಿ ಬೋರೆ ಗ್ರಾಮಕ್ಕೆ ತೆರಳುವ ರಸ್ತೆ ಸಂಪೂರ್ಣ ಹಾಳಾದ ಕಾರಣ ಬೇರೆ ಊರುಗಳ ಗ್ರಾಮಸ್ಥರು ಸಹ ಗ್ರಾಮಕ್ಕೆ ಬರಲು ಹಿಂದೇಟು ಹಾಕುವಂತಾಗಿದೆ. ರಾತ್ರಿಯಾದರೆ ಹದಗೆಟ್ಟ ರಸ್ತೆ ಸಂಚಾರ ಯೋಗ್ಯವಲ್ಲದ ಕಾರಣ ಮನೆ ಬಿಟ್ಟು ಹೊರ ಹೋಗಲಾರದ ಪರಿಸ್ಥಿತಿ ಗ್ರಾಮಸ್ಥರಿಗೆ ಬಂದೊದಗಿದೆ.

ಈ ಹಾಳದ ರಸ್ತೆ ಮೂಲಕವೇ ದುಮ್ಮಿ ಕಾವಲು, ಕೊರಟಿಕೆರೆ ಕಾವಲು ಮಾರ್ಗವಾಗಿ ಇಬ್ಬಡಿ ಗ್ರಾಮಕ್ಕೆ ಹಾದು ಹೋಗಿರುವ ಮುಖ್ಯ ರಸ್ತೆಯಂತೂ ಪೂರ್ತಿ ಹಾಳಾಗಿದೆ. ರಸ್ತೆಗೆ ಡಾಂಬರು ಹಾಕಿ ಯಾವುದೋ ಕಾಲವಾಗಿದೆ. ಮಳೆಗಾಲವಾದ ಕಾರಣ ಡಾಂಬರು ಕಿತ್ತು ಹದಗೆಟ್ಟು ಹೋಗಿರುವ ರಸ್ತೆಯಗಲಕ್ಕೂ ಗುಂಡಿ ಹೊಂಡಗಳು ಬಾಯ್ತೆರೆದಿದ್ದು ಅಪಾಯಕ್ಕೆ ಆಹ್ವಾನ ನೀಡುತ್ತಿವೆ.



> ದುಮ್ಮಿ ಕಾವಲು ಮಾರ್ಗವಾಗಿ ಇಬ್ಬಡಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಹದಗೆಟ್ಟಿದ್ದು ದುರಸ್ತಿ ಪಡಿಸಲು ಇಲಾಖೆಯಲ್ಲಿ ಯಾವುದೇ ಅನುದಾನವಿಲ್ಲ. ಸರ್ಕಾರ ಹಣ ಬಿಡುಗಡೆ ಮಾಡಿದ ನಂತರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು.
>
> **– ಶರತ್, ಜಿಪಂ ಸಹಾಯಕ ಇಂಜಿನಿಯರ್, ಅರಕಲಗೂಡು**

### ಇಡೀ ರಸ್ತೆ ಗುಂಡಿಮಯ

ಗುಂಡಿಗಳಿಂದ ಅಧ್ವಾನವಾಗಿರುವ ರಸ್ತೆಯಲ್ಲಿ ತಾಲೂಕು ಕೇಂದ್ರ ಅರಕಲಗೂಡು ಮಾರ್ಗವಾಗಿ ಪ್ರತಿನಿತ್ಯ ನೂರಾರು ವಾಹನಗಳು, ಕಾರುಗಳು, ದ್ವಿಚಕ್ರ ವಾಹನಗಳು ಸಂಚರಿಸುತ್ತವೆ. ಶಾಲಾ- ಕಾಲೇಜುಗಳಿಗೆ ನಿತ್ಯ ಓಡಾಡುವ ವಿದ್ಯಾರ್ಥಿಗಳ ಪಾಡು ಹೇಳತೀರದಾಗಿದೆ. ದುಮ್ಮಿ ಕಾವಲು ಗ್ರಾಮದಿಂದ ಆರಂಭವಾಗುವ ಹೊಂಡಗಳು ರಸ್ತೆಯುದ್ದಕ್ಕೂ ಅಪಾಯಕಾರಿ ಸ್ಥಿತಿಯಲ್ಲಿವೆ. ಕೆಲವು ಕಡೆ ವಾಹನಗಳು ಹೊಂಡಕ್ಕಿಳಿಯಲಾಗದಷ್ಟು ಮಳೆ ಕೆಸರು ನೀರು ತುಂಬಿದೆ. ರಸ್ತೆ ಕೂಡ ಕಿರಿದಾಗಿದೆ. ಹಾಳಾದ ಕಿಷ್ಕಿಂದೆ ರಸ್ತೆಯಲ್ಲಿ ಎರಡು ವಾಹನಗಳು ಎದುರು ಬದುರಾದರೆ ಅಪಘಾತ ಕಟ್ಟಿಟ್ಟಬುತ್ತಿ. ಹೊಂಡಗಳಿಗೆ ಇಳಿದರೆ ವಾಹನ ಸವಾರರು ಮುಂದೆ ಚಲಿಸಲು ಹರಸಾಹಸ ಪಡುವಂತಾಗಿದೆ.

### ಅಭಿವೃದ್ಧಿ ಮರೆತ ಅಧಿಕಾರಿ, ಜನಪ್ರತಿನಿಧಿ

ರೈತಾಪಿ ವರ್ಗದ ಜನರೇ ಹೆಚ್ಚಾಗಿ ಸಂಚರಿಸುವ ಈ ಮಾರ್ಗದ ರಸ್ತೆ ಅಭಿವೃದ್ಧಿ ಪಡಿಸುವುದನ್ನೇ ಅಧಿಕಾರಿಗಳು ಮತ್ತು ಜನಪ್ರತಿನಿಧಿ ಮರೆತಂತಿದೆ. ದೊಡ್ಡಮಗ್ಗೆ ಹೋಬಳಿ ವ್ಯಾಪ್ತಿಗೆ ಸೇರಿದ ಈ ಭಾಗದ ಅನೇಕ ಸಂಪರ್ಕ ರಸ್ತೆಗಳಲ್ಲಿ ಅಭಿವೃದ್ಧಿ ಕಾಣದಾಗಿವೆ. ಹೀಗಾಗಿ ತಾಲ್ಲೂಕು ಕೇಂದ್ರ ಅರಕಲಗೂಡು ಪಟ್ಟಣಕ್ಕೆ ತೆರಳಲು ಸಾಧ್ಯವಾಗದ ಸ್ಥಿತಿಗೆ ತಲುಪಿದೆ. ನಾಡಕಚೇರಿ, ರೈತ ಸಂಪರ್ಕ ಕೇಂದ್ರ ಮತ್ತಿತರ ಸರ್ಕಾರಿ ಕೆಲಸಗಳಿಗೆ ತೆರಳಲು ಹೋಬಳಿ ಕೇಂದ್ರವಾದ ದೊಡ್ಡಮಗ್ಗೆಗೆ ಹೋಗಲು ರಸ್ತೆ ಸಂಪರ್ಕ ಸರಿಯಿಲ್ಲದಾಗಿದೆ.

ಮೂಲ ಸೌಕರ್ಯ ವಂಚಿತ ಇಬ್ಬಡಿ ಬೋರೆ: ಒಂದೆಡೆ ಇಬ್ಬಡಿ ಮಾರ್ಗದ ರಸ್ತೆ ಹಾಳಾಗಿದ್ದರೆ ಮತ್ತೊಂದೆ ಇಬ್ಬಡಿ ಬೋರೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಗ್ರಾಮದಲ್ಲಿ 50ಕ್ಕೂ ಹೆಚ್ಚು ಮನೆಗಳಿದ್ದು ಮೂಲ ಸೌಕರ್ಯಗಳಲ್ಲಿ ಒಂದಾದ ಸಂಪರ್ಕ ರಸ್ತೆಯನ್ನೆ ಸರಿಪಡಿಸಿಲ್ಲ. ಇಬ್ಬಡಿ ಮುಖ್ಯ ರಸ್ತೆ ವರೆಗೆ ಸಂಪರ್ಕ ಕಲ್ಪಿಸುವ ರಸ್ತೆ ಮಳೆಗಾಲದಲ್ಲಿ ಕೆಸರು ಗದ್ದೆಯಾಗಿ ಮಾರ್ಪಟ್ಟಿದೆ. ಇಬ್ಬಡಿ ಬೋರೆ ವಾಸದ ಮನೆಗಳ ಮುಂಭಾಗದ ಓಣಿ ಹಾದಿಯಲ್ಲಿ ಕಾಲಿಡಲಾಗದೆ ಕೆಸರಿನ ಹೂಳಿನಿಂದ ಕೂಡಿದೆ. ಗ್ರಾಮಸ್ಥರು ಕೆಸರು ತುಳಿದು ಮನೆಯೊಳಗೆ ಹೋಗಬೇಕಾದ ದುಸ್ಥಿತಿ ಎದುರಾಗಿದೆ.

> ಇಬ್ಬಡಿ ಬೋರೆ ಗ್ರಾಮಕ್ಕೆ ಮೂಲ ಸೌಕರ್ಯಗಳನ್ನೆ ಕಲ್ಪಿಸಿಲ್ಲ. ಸಂಪರ್ಕ ರಸ್ತೆ ಹಾಳಾಗಿದ್ದು ದುರಸ್ತಿ ಪಡಿಸಿಲ್ಲ. ಅರಕಲಗೂಡಿಗೆ ತೆರಳುವ ಇಬ್ಬಡಿ ಮುಖ್ಯ ರಸ್ತೆ ಕೂಡ ಡಾಂಬರು ಕಿತ್ತು ಹದಗೆಟ್ಟು ಹೋಗಿದೆ. ಆಸ್ಪತ್ರೆ, ಪಟ್ಟಣ ಪ್ರದೇಶಗಳಿಗೆ ತೆರಳಲು ವಯಸ್ಸಾದವರು, ಮಹಿಳೆಯರ ಓಡಾಟಕ್ಕೆ ತೊಂದರೆಯಾಗಿದೆ. ನಮ್ಮೂರಿನತ್ತ ಯಾರೂ ತಿರುಗಿ ನೋಡುತ್ತಿಲ್ಲ. ಮಳೆಗಾಲದಲ್ಲಿ ಕಚ್ಚಾ ರಸ್ತೆಯಂತಿದ್ದು ತಿರುಗಾಡುವುದೇ ಕಷ್ಟಕರವಾಗಿದೆ.
>
> **– ಕೃಷ್ಣೇಗೌಡ, ಇಬ್ಬಡಿ ಬೋರೆ ಗ್ರಾಮಸ್ಥ**



# ಜಮೀನು ದಾರಿ ಬಂದ್ ಶಾಸಕ ಬಾಲಕೃಷ್ಣ ಭೇಟಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಹಿರೀಸಾವೆ ರೈಲ್ವೆ ನಿಲ್ದಾಣದ ಬಳಿ ರೈತರು ಜಮೀನಿಗೆ ಹೋಗಲು ದಾರಿ ಇಲ್ಲದೆ ಸಮಸ್ಯೆಯಾಗಿದೆ. ಜಿಲ್ಲಾಧಿಕಾರಿ ಸ್ಥಳ ಪರಿಶೀಲನೆ ಮಾಡಿ ಸಮಸ್ಯೆ ಬಗೆಹರಿಸಬೇಕು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಆಗ್ರಹಿಸಿದರು.



ತಾಲ್ಲೂಕಿನ ಹಿರೀಸಾವೆ ರೈಲ್ವೆ ನಿಲ್ದಾಣಕ್ಕೆ ಭೇಟಿ ನೀಡಿದ ಅವರು, ರೈತರು ತೆಂಗಿನ ತೋಟ, ಹೊಲಕ್ಕೆ, ಈ ಭಾಗದಲ್ಲಿ ಇರುವ ಮನೆಯವರು ಹಾಗೂ ರಾಮೇಶ್ವರ ದೇವಸ್ಥಾನಕ್ಕೆ ರೈಲ್ವೆ ನಿಲ್ದಾಣ ಮತ್ತು ಹಾಸನಬೆಂಗಳೂರು ಮಾರ್ಗದ ಪಕ್ಕದಲ್ಲಿ ಇದ್ದ ಜಾಗದಲ್ಲಿ ತಿರುಗಾಡುತ್ತಿದ್ದರು ಎಂದರು.

ಕಳೆದ ವಾರ ಇಲಾಖೆಯೂ ಈ ಜಾಗಕ್ಕೆ ಕಬ್ಬಿಣದ ಕಂಬಿಗಳ ಬೇಲಿಯನ್ನು ಹಾಕಿ, ಜನರಿಗೆ ಓಡಾಡಲು ದಾರಿ ಬಿಟ್ಟಿಲ್ಲ. ಅದರಿಂದ ಸಮಸ್ಯೆಯಾಗಿದೆ ಎಂದು ಸಾರ್ವಜನಿಕರು ಶಾಸಕರಿಗೆ ಮನವಿ ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ಅವರು ಭೇಟಿ ನೀಡಿ ದಾರಿ ಇಲ್ಲದನ್ನು ಗಮನಿಸಿ, ದೂರವಾಣಿ ಮೂಲಕ ಜಿಲ್ಲಾಧಿಕಾರಿ ಅವರನ್ನು ಸಂಪರ್ಕಿಸಿ, ಸಮಸ್ಯೆ ಬಗೆಹರಿಸುವಂತೆ ಕೇಳಿಕೊಂಡರು. ಮುಖಂಡರಾದ ರಾಮಕೃಷ್ಣ, ರವಿಕುಮಾರ್, ಮಹೇಶ್, ವೆಂಕಟೇಶ್, ಸಿದ್ದಲಿಂಗಪ್ಪ, ಹೊಟೆಲ್ ರಾಮಣ್ಣ, ಉಯ್ಯಾಲೆ ಕಂಬದ ಕುಮಾರ್, ಸೊಸೈಟಿ ಹರೀಶ್, ಶ್ರೀನಾಥಬಾಬು, ಶೇಖರ ಇತರರು ಸಮಸ್ಯೆ ಹೇಳಿಕೊಂಡರು.

## ಆಲೂರು ತಾಲ್ಲೂಕಿನಾದ್ಯಂತ ಸಂಭ್ರಮ ಗಣೇಶ ಹಬ್ಬ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಎಲ್ಲೆಡೆ ಗೌರಿ-ಗಣೇಶ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಹಬ್ಬದ ಎರಡು ದಿನವೂ ಸೋನೆ ಮಳೆ ಪ್ರಾರಂಭವಾಗಿ ಆಕಾಶದಲ್ಲಿ ಸೂರ್ಯನ ಕಾಣದೆ ಜಿನುಗು ಮಳೆಯಲ್ಲಿ ಹಬ್ಬ ಆಚರಿಸಿದರು.

ಸೋಮವಾರದಿಂದ ಹಬ್ಬದ ತಯಾರಿ ಜೋರಾಗಿತ್ತು. ಮಂಗಳವಾರ ಗೌರಿ ಹಬ್ಬವನ್ನು ಆಚರಿಸಿದರೆ ಬುಧವಾರ ಗಣೇಶ ಹಬ್ಬವನ್ನ ಆಚರಿಸಿದರು. ಪಟ್ಟಣದ ಬಸ್ ನಿಲ್ದಾಣದ ಮುಂಭಾಗ, ಕೊನೆಪೇಟೆ ಮತ್ತು ಕೆಇಬಿ ವೃತ್ತದಲ್ಲಿ ಮಣ್ಣಿನ ಬೃಹತ್ ಗಣಪತಿ ಮೂರ್ತಿಗಳನ್ನಿಟ್ಟು ಪ್ರತಿಷ್ಠಾಪಿಸಲಾಯಿತು. ಕೆಇಬಿ ಸರ್ಕಲ್‌ನಲ್ಲಿ ಪ್ರತಿಷ್ಠಾಪಿಸಿರುವ ಗಣಪತಿ ಪೆಂಡಾಲ್ ಮುಂದೆ ಭಾಗವಧ್ವಜ ಆರೋಹಣ ಮಾಡಲಾಯಿತು. ಪರಿಸರ ಕಾಪಾಡುವ ಉದ್ದೇಶದಿಂದ ಯಾವುದೆ ಸಂಘಟಿತರು ಪಿಒಪಿ ಗಣಪತಿಗೆ ಮೊರೆ ಹೋಗದಿರುವುದು ವಿಶೇಷ.

ಪ್ರತಿ ಗ್ರಾಮ, ಮನೆಗಳಲ್ಲಿ ಯುವಜನರು ಸಂಘಟಿತರಾಗಿ ಗೌರಿ, ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಿದ್ದಾರೆ. ಮನೆಗಳಲ್ಲಿ ಪೂಜಿಸಿದ ಕೆಲವರು ಗಣಪತಿ ಹಬ್ಬ ಆಚರಿಸಿದ ನಂತರ ಸಮೀಪದ ಕೆರೆ, ಬಾವಿಗಳಲ್ಲಿ ಸಂಜೆ ವಿಸರ್ಜನೆ ಮಾಡಿದರು.

# ಕಾಫಿ ಬೆಳೆಗಾರರಿಗೆ ಪರಿಸರ ಸ್ನೇಹಿ ಗಿಡ ವಿತರಣೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ : ಕಾಫಿ ಬೆಳೆಯಲ್ಲಿ ಉಂಟಾಗುತ್ತಿರುವ ವಾತಾವರಣ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು, ಪರಿಸರ ಸ್ನೇಹಿ ಗಿಡ ವಿತರಣೆ ಕಾರ್ಯಕ್ರಮ ಸಕಲೇಶಪುರ ತಾಲೂಕಿನ ವಡೂರಿನಲ್ಲಿ ನಡೆಯಿತು.

ಹಿಂದುಸ್ಥಾನ್ ಯೂನಿಲಿವರ್ ಲಿಮಿಟೆಡ್, ಎಆಇ ಐ ಹಾಗೂ ಆಲೂ ಸಂಸ್ಥೆಗಳ ನೆರವಿನಿಂದ ಖಆ ಸಂಸ್ಥೆ ಈ ಗಿಡ ವಿತರಣೆ ಯೋಜನೆ ಕೈಗೊಂಡಿದೆ.

ಬೆಳೆಗಾರರಿಗೆ ಮಾಹಿತಿ ನೀಡಿದ ಜಿಲ್ಲಾ ಸಂಯೋಜಕ ಶಶಿಧರ್ ಹೊಸಗದ್ದೆ ಅವರು, "ರೈತರು ಈ ಗಿಡಗಳನ್ನು ಬೆಳೆಸಿ ಪರಿಸರ ಸಂರಕ್ಷಣೆಗೆ ತಮ್ಮದೇ ಕೊಡುಗೆ ನೀಡಬೇಕು" ಎಂದು ಕರೆ ನೀಡಿದರು.

ಯೋಜನೆಯಲ್ಲಿ ಗಿಡಗಳನ್ನು ಯೋಜನೆಯ ಸಂಪರ್ಕದಲ್ಲಿರುವ ಸಕಲೇಶಪುರ ತಾಲೂಕಿನ ಹೆತ್ತೂರು ಹಾನಬಾಳು ಕಸಬಾ ಹೋಬಳಿಗಳ ರೈತರಿಗೂ ವಿತರಿಸಲಾಗುವುದು ಎಂದು ತಿಳಿಸಿದರು.

ಸಿಬ್ಬಂದಿ ಸುಮಾ ವಡೂರು ಅವರು ರೈತರಿಗೆ ಗಿಡಗಳನ್ನು ಹಸ್ತಾಂತರಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ರೈತರು ಈ ಯೋಜನೆಯಿಂದ ಪರಿಸರ ಸಂರಕ್ಷಣೆಗೂ, ಕಾಫಿ ಬೆಳೆಗಳ ಸ್ಥಿರತೆಗೂ ಸಹಾಯವಾಗುತ್ತದೆ ಎಂದು ಸಂತೋಷ ವ್ಯಕ್ತಪಡಿಸಿದರು.

# ಕೃಷಿ ಉದ್ಯಮಿಯ ವಾರ್ಷಿಕ ವಹಿವಾಟು 9 ಕೋಟಿ ರೂ.

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಪಂಜಾಬಿನ ಬಟಾಲದ ಜಗಮೋಹನ್ ಸಿಂಗ್ ನಾಗಿ (66 ವರುಷ) ಅವರಿಗೆ ಬಾಲ್ಯದಿಂದಲೂ ಕೃಷಿಯಲ್ಲಿ ಆಸಕ್ತಿ. ಅದರಿಂದಾಗಿ ಪದವೀಧರರಾದ ನಂತರ ಅವರು ಕೃಷಿಯಲ್ಲೇ ತೊಡಗಿದರು. ಆರಂಭದಲ್ಲಿ ಕೆಲವೇ ಎಕರೆಗಳಲ್ಲಿ ಜೋಳ ಬೆಳೆಯುತ್ತಿದ್ದ ಅವರೀಗ ಒಪ್ಪಂದ ಕೃಷಿಯಲ್ಲಿ 300 ಎಕರೆಯಲ್ಲಿ ಜೋಳ, ಸಾಸಿವೆ ಮತ್ತು ಗೋಧಿ ಬೆಳೆಯುತ್ತಿದ್ದಾರೆ. ಜೊತೆಗೆ, ಕ್ಯಾರೆಟ್, ಬೀಟ್‌ರೂಟ್, ಟೊಮೆಟೋ ಮತ್ತು ಹೂಕೋಸು ತರಕಾರಿಗಳನ್ನೂ ಬೆಳೆಯುತ್ತಿದ್ದಾರೆ.

ಮುನ್ನೂರು ರೈತರ ಜಮೀನಿನಲ್ಲಿ ಒಪ್ಪಂದದ ಮೂಲಕ ಬೆಳೆಸುತ್ತಿರುವ ಬೆಳೆಗಳ ಫಸಲಿನ ಖರೀದಿ ಫಸಲನ್ನು ಸಂಸ್ಕರಿಸಿ, ಪೆಪ್ಸಿ ಕೋ, ಕೆಲ್ಲೋಗ್ಸ್ ಮತ್ತು ಡೊಮಿನೋಸ್ ಪಿಝ್ಝಾ ಕಂಪೆನಿಗಳಿಗೆ ಮಾರಾಟ. ಇಂಗ್ಲೆಂಡ್, ನ್ಯೂಝಿಲೆಂಡ್, ದುಬೈ ಮತ್ತು ಹಾಂಕಾಂಗ್‌ಗಳಿಗೆ ಸಂಸ್ಕರಿತ ಉತ್ಪನ್ನಗಳ ರಫ್ತು. ಇವೆಲ್ಲದರಿಂದಾಗಿ ಅವರ ಆಕುಲವಂತ್ ನ್ಯೂಟ್ರಿಷನ್‌ಟಿ ಕಂಪೆನಿಗೆ ಈಗ ವಾರ್ಷಿಕ ರೂ.9 ಕೋಟಿ ವ್ಯವಹಾರ ದಾಖಲಿಸಲು ಸಾಧ್ಯವಾಗಿದೆ.



ಬ್ರಿಟನ್‌ನ ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾಲಯದಲ್ಲಿ ಏಕದಳ ಧಾನ್ಯಗಳ ಮಿಲ್ಲಿಂಗ್ ಮತ್ತು ಇಂಜಿನಿಯರಿಂಗ್‌ನಲ್ಲಿ ಪದವಿ ಗಳಿಸಿ ತನ್ನೂರಿಗೆ ಮರಳಿದರು ಜಗಮೋಹನ್ ಸಿಂಗ್. 1989ರಲ್ಲಿ ಕುಲವಂತ್ ನ್ಯೂಟ್ರಿಷನ್ ಎಂಬ ಕೃಷಿ ಆಧಾರಿತ ಉದ್ಯಮ ಸ್ಥಾಪಿಸಿ ಜೋಳದ ಸಂಸ್ಕರಣೆಗೆ ಶುರುವಿಟ್ಟರು.

ಆದರೆ ಆಗ ಪಂಜಾಬಿನಲ್ಲಿ ಒಳ್ಳೆಯ ಗುಣಮಟ್ಟದ ಜೋಳದ ಫಸಲು ಖರೀದಿಗೆ ಸಿಗುತ್ತಿರಲಿಲ್ಲ. ಹಾಗಾಗಿ ಅವರು ಹಿಮಾಚಲ ಪ್ರದೇಶದಿಂದ ಜೋಳ ಖರೀದಿಸಲು ಶುರು ಮಾಡಿದರು. ಆದರೆ ಜೋಳದ ಸಾಗಾಟ ವೆಚ್ಚ ದುಬಾರಿಯಾಯಿತು. ಆದ್ದರಿಂದ ಅವರು ಪಂಜಾಬ್ ಕೃಷಿ ವಿಶ್ವವಿದ್ಯಾಲಯದ ಸಹಕಾರದಿಂದ ಪಂಜಾಬಿನಲ್ಲೇ ಜೋಳ ಬೆಳೆಸುವ ಯೋಜನೆಗೆ ಚಾಲನೆ ನೀಡಿದರು.

ಇದರ ಅನುಸಾರ, ಕೃಷಿ ವಿಶ್ವವಿದ್ಯಾಲಯವು ರೈತರಿಗೆ ಉತ್ತಮ ಗುಣಮಟ್ಟದ ಜೋಳದ ಬೀಜ ಒದಗಿಸುತ್ತದೆ ಮತ್ತು ಅದನ್ನು ಬಿತ್ತಿ ಬೆಳೆಸಿದ ರೈತರಿಂದ ಜಗಮೋಹನ್ ಸಿಂಗ್ ಫಸಲು ಖರೀದಿಸ ತೊಡಗಿದರು. ಅನಂತರ, ತಾನೇ ಜೋಳ ಬೆಳೆಸಲು ನಿರ್ಧರಿಸಿದರು; ಅದಕ್ಕಾಗಿ 1991ರಿಂದ ಒಪ್ಪಂದ ಕೃಷಿ ಮೂಲಕ ಇತರ ರೈತರ ಜಮೀನಿನಲ್ಲಿ ಜೋಳದ ಕೃಷಿ ಶುರು ಮಾಡಿ, ಕ್ರಮೇಣ ತನಗೆ ಬೇಕಷ್ಟು ಜೋಳ ತಾನೇ ಬೆಳೆಯತೊಡಗಿದರು.

ಅವರ ಕಂಪೆನಿಯ ಮೊದಲ ಗ್ರಾಹಕ ಕೆಲ್ಲೋಗ್ಸ್. 1992ರಲ್ಲಿ ಪೆಪ್ಸಿ ಕೋ ಜೊತೆ ಒಡಂಬಡಿಕೆ ಮಾಡಿಕೊಂಡು, ಅದರ ಕುರ್-ಕುರೆ ತಿನಿಸಿಗಾಗಿ ಜೋಳ ಸರಬರಾಜು ಮಾಡತೊಡಗಿದರು. ಆಗ ತಿಂಗಳಿಗೆ ಒಂದು ಸಾವಿರ ಟನ್ ಜೋಳಕ್ಕೆ ಬೇಡಿಕೆಯಿತ್ತು ಎಂದು ತಿಳಿಸುತ್ತಾರೆ ಜಗಮೋಹನ್ ಸಿಂಗ್. 1994ರಿಂದ ಡೊಮಿನೋಸ್ ಪಿಝ್ಝಾಕ್ಕೆ ಕೂಡ ಅವರ ಜೋಳ ಮಾರಾಟ ಶುರು. ತದನಂತರ, 2013ರಿಂದ ಡಬ್ಬಗಳಲ್ಲಿ ಸಂಸ್ಕರಿತ ಆಹಾರ ಮಾರಲು ಆರಂಭಿಸಿದರು ಮತ್ತು ತರಕಾರಿಗಳನ್ನೂ ಬೆಳೆಯತೊಡಗಿದರು.

ಅವರ ಕೃಷಿ ಆಧಾರಿತ ಉದ್ಯಮವು ವೇಗವಾಗಿ ಬೆಳೆಯುತ್ತಿದ್ದಾಗ, 2020ರಲ್ಲಿ ಕೊರೋನಾ ವೈರಸ್ ನಮ್ಮ ದೇಶಕ್ಕೆ ಧಾಳಿ ಮಾಡಿತು. ಇದರಿಂದಾಗಿ ಅವರು ಹಲವಾರು ಸವಾಲುಗಳನ್ನು ಎದುರಿಸಬೇಕಾಯಿತು.

ಕೊರೋನಾ ವೈರಸಿನ ಧಾಳಿಯ ಸಂದರ್ಭದಲ್ಲಿ ತಾನು ಗಮನಿಸಿದ ಒಂದು ಸಂಗತಿಯನ್ನು ಜಗಮೋಹನ್ ಸಿಂಗ್ ಹೀಗೆಂದು ತಿಳಿಸುತ್ತಾರೆ. ಆ ಸಮಯದಲ್ಲಿ ಹಲವು ಕಾರ್ಖಾನೆಗಳು ಮತ್ತು ವ್ಯವಹಾರ ಮಳಿಗೆಗಳು ಮುಚ್ಚಿದವು. ಆದರೆ, ದಿನಸಿ ಮಳಿಗೆಗಳು ತಮ್ಮ ವ್ಯಾಪಾರ ಮುಂದುವರಿಸಿದವು. ಯಾಕೆಂದರೆ ಅವು ಜೀವನಾವಶ್ಯಕ ವಸ್ತುಗಳನ್ನು ಜನರಿಗೆ ಪೂರೈಸುತ್ತಿದ್ದವು. ಆದ್ದರಿಂದ ಆ ಸಮಯದಲ್ಲಿ ನಾನು ಸಾವಯವ ಗೋಧಿ ಹುಡಿ ಮತ್ತು ಸಾವಯವ ಜೋಳದ ಹುಡಿಯ ಪೂರೈಕೆಯನ್ನು ಹೆಚ್ಚಿಸುವುದಕ್ಕೆ ಗಮನ ಹರಿಸಿದೆ. ಭತ್ತ ಬೆಳೆದು, ಅದರ ಅಕ್ಕಿಯ ಮಾರಾಟ ಮತ್ತು ಸಾಸಿವೆ ಸಂಸ್ಕರಿಸಿ ಸಾಸಿವೆ ಎಣ್ಣೆಯ ಮಾರಾಟ - ಇವು ತಮ್ಮ ಮುಂದಿನ ಯೋಜನೆಗಳು ಎಂದು ಅವರು ಮಾಹಿತಿ ನೀಡುತ್ತಾರೆ.

ಅವರ ಇನ್ನೆರಡು ಸಾಧನೆಗಳು: ತಮ್ಮ ಕಂಪೆನಿಯಲ್ಲಿ 70 ಜನರಿಗೆ ಉದ್ಯೋಗ ನೀಡಿರುವುದು ಹಾಗೂ ರೈತರು ಮತ್ತು ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ನೀಡುತ್ತಿರುವುದು. ಅದಲ್ಲದೆ, ರೈತರಿಗೆ ಸುಧಾರಿತ ಕೃಷಿ ವಿಧಾನಗಳ ಮತ್ತು ಫಸಲನ್ನು ಲಾಭದಾಯಕವಾಗಿ ಮಾರಾಟ ಮಾಡುವ ಬಗ್ಗೆ ಮಾಹಿತಿಯನ್ನೂ ಒದಗಿಸುತ್ತಿದ್ದಾರೆ. ಸತ್‌ಬೀರ್ ಸಿಂಗ್ ಎಂಬ ರೈತ ತನ್ನ ಅನುಭವವನ್ನು ಹೀಗೆಂದು ಹಂಚಿಕೊಳ್ಳುತ್ತಾರೆ. ಜಗಮೋಹನ್ ಸಿಂಗ್ ಜೊತೆ ನಾನು ಹಲವಾರು ವರುಷಗಳಿಂದ ವ್ಯವಹಾರ ಮಾಡುತ್ತಿದ್ದೇನೆ. ನನ್ನ ಕೃಷಿ ಉತ್ಪನ್ನಗಳನ್ನು ಮೌಲ್ಯವರ್ಧನೆ ಮಾಡಿ ಮಾರಾಟ ಮಾಡುವುದು ಹೇಗೆಂದು ನನಗೆ ಅವರು ಕಲಿಸಿದ್ದಾರೆ. ಉದಾಹರಣೆಗೆ, ಹಾಲನ್ನು ಮಾರುವ ಬದಲು ಅದನ್ನು ತುಪ್ಪ ಮತ್ತು ಮೊಸರಾಗಿ ಪರಿವರ್ತಿಸಿ ಮಾರಿದರೆ ಹೆಚ್ಚು ಲಾಭ ಎಂಬುದು ಅವರ ಸಲಹೆ. ಅವರ ದಿನಸಿ ವ್ಯವಹಾರಕ್ಕಾಗಿ ನನ್ನಿಂದ ಕೃಷಿ ಉತ್ಪನ್ನಗಳನ್ನು ಅವರು ಖರೀದಿಸುತ್ತಿದ್ದಾರೆ.

ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಕೃಷಿ ಆಧಾರಿತ ಉದ್ಯಮಗಳನ್ನು ಸ್ಥಾಪಿಸಲು ಸರಕಾರ ಪ್ರೋತ್ಸಾಹ ನೀಡಬೇಕೆಂಬುದು ಜಗಮೋಹನ್ ಸಿಂಗ್ ನಾಗಿ ಅವರ ಆಶಯ. ತಮ್ಮ ಜಮೀನಿಗೆ ಸೂಕ್ತವಲ್ಲದ ಬೆಳೆ ಬೆಳೆಯುವ ಈಗಿನ ಟ್ರೆಂಡ್ ಅನುಸರಿಸುವ ಬದಲಾಗಿ, ತಮ್ಮ ಜಮೀನಿಗೆ ಸೂಕ್ತವಾದ ಬೆಳೆಯನ್ನೇ ಬೆಳೆಯಬೇಕೆಂಬುದು ರೈತರಿಗೆ ಅವರ ಕಿವಿಮಾತು.

## ಇತಿಹಾಸದಲ್ಲಿ ಈ ದಿನ

### ಆಗಸ್ಟ್-29

1756: ಫ್ರೆಂಚ್ ಪಡೆಗಳು ಮಿನೊರ್ಕಾ (ದ್ವೀಪ) ವಶಪಡಿಸಿಕೊಂಡವು.

1831: ಮೈಕಲ್ ಫ್ಯಾರಡೇ ವಿದ್ಯುತ್‌ಚುಂಬಕ ಪ್ರೇರಣೆ ಎಂಬ ಮಹತ್ವದ ಆವಿಷ್ಕಾರವನ್ನು ಪರಿಚಯಿಸಿದರು.

1885: ಜರ್ಮನಿಯಲ್ಲಿ ಗಾಟ್‌ಲಿಬ್ ಡೈಮ್ಲರ್ ಮೊದಲ ಮೋಟರ್ ಸೈಕಲ್ ಅನ್ನು ತಯಾರಿಸಿದರು.

1947: ಭಾರತ ಸ್ವಾತಂತ್ರ್ಯ ಪಡೆದ ನಂತರ, ಬಾಂಬೆ (ಈಗಿನ ಮುಂಬೈ)ಯಲ್ಲಿ ಮೊದಲ ಬಾರಿಗೆ ಕ್ರಿಕೆಟ್ ಟೆಸ್ಟ್ ಪಂದ್ಯ ನಡೆಯಿತು.

1953: ಸೋವಿಯತ್ ಯೂನಿಯನ್ ತನ್ನ ಮೊದಲ ಹೈಡ್ರೋಜನ್ ಬಾಂಬ್ ಪರೀಕ್ಷೆ ನಡೆಸಿತು.

1974: ಭಾರತ ಸರ್ಕಾರ ಕೋಕಾ-ಕೋಲಾ ಕಂಪನಿಯನ್ನು ದೇಶ ಬಿಟ್ಟು ಹೋಗುವಂತೆ ಸೂಚಿಸಿತು.

2005: ಹರಿಕೇನ್ ಕತ್ರೀನಾ ಅಮೆರಿಕಾದ ನ್ಯೂ ಓರ್ಲೀನ್ಸ್ ನಗರವನ್ನು ಭೀಕರವಾಗಿ ಹೊಡೆದಿತ್ತು.

**ಜನನ**

1632: ಜಾನ್ ಲಾಕ್, ಇಂಗ್ಲಿಷ್ ತತ್ವಜ್ಞ

1876: ಚಾರ್ಲ್ಸ್ ಕೇಟರಿಂಗ್, ಅಮೆರಿಕಾದ ಆವಿಷ್ಕಾರಕ

1904: ವೇರ್ನಾ ವಾನ್ ಬ್ರಾನ್, ಜರ್ಮನ್ ಮೂಲದ ರಾಕೆಟ್ ತಜ್ಞ, ನಂತರ ಅಮೆರಿಕಾದ ವಿಜ್ಞಾನಿ

1929: ಲಕ್ಕಿ ಅಲಿ ತಂದೆ ಹಾಗೂ ಪ್ರಸಿದ್ಧ ಬಾಲಿವುಡ್ ಗಾಯಕ-ನಟ ಮೊಹಮ್ಮದ್ ರಫಿ

1958: ಮೈಕೆಲ್ ಜಾಕ್ಸನ್, ವಿಶ್ವಪ್ರಸಿದ್ಧ ಅಮೆರಿಕಾದ ಪಾಪ್ ಗಾಯಕ

**ಮರಣ**

1533: ಅಟಾಹುವಾಲ್ಪಾ, ಇಂಕಾ ಸಾಮ್ರಾಜ್ಯದ ಕೊನೆಯ ಚಕ್ರವರ್ತಿ

1929: ಅರ್ಶಿಲ್ ಗಾರ್ಕಿ, ಪ್ರಸಿದ್ಧ ಅಮೆರಿಕಾದ ಚಿತ್ರಕಲಾವಿದ

2016: ಜನಪ್ರಿಯ ಅಮೆರಿಕಾದ ಹಾಸ್ಯನಟ ಜೀನ್ ವೈಲ್ಡರ್

# ಮರ ಹತ್ತದ ಮೀನು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್


ಉತ್ತಮ ಕಥೆಗಾರ ಎಂದು ಹೆಸರುವಾಸಿಯಾಗಿರುವ ವಿನಾಯಕ ಅರಳಸುರಳಿಯವರು ಬರೆದ ಕಥೆಗಳ ಸಂಕಲನ ಮರ ಹತ್ತದ ಮೀನು. ಓದುಗರನ್ನು ಆವರಿಸಿಕೊಳ್ಳುವಂಥ ಗುಣ ಕಥೆಗಳಿಗೆ ದಕ್ಕಬೇಕಾದರೆ ಕಥೆಗಾರ ಹಲವು ಅನುಭವಗಳಿಗೆ ಈಡಾಗಬೇಕಾಗುತ್ತದೆ. ಎಷ್ಟೋ ಸಂದರ್ಭಗಳಿಗೆ ಸಾಕ್ಷಿಯಾಗಬೇಕಾಗುತ್ತದೆ. ಕೆಲವೊಮ್ಮೆ ತಾನೇ ಪಾತ್ರವಾಗಬೇಕಾಗುತ್ತದೆ, ಕಷ್ಟವನ್ನು, ಕೆಡುಕುಗಳನ್ನು ನೋಡಬೇಕಾಗುತ್ತದೆ ಅನುಭವಿಸಬೇಕಾಗುತ್ತದೆ. ಮತ್ತೆ ಕೆಲವೊಮ್ಮೆ ಮರೆಯಲ್ಲಿ ನಿಂತ ನಿರೂಪಕನಂತೆ ಕಥೆ ಹೇಳಬೇಕಾಗುತ್ತದೆ. ಇದೆಲ್ಲವನ್ನು ವಿನಾಯಕ ಅರಳಸುರಳಿ ಅವರು ಅನುಭವಿಸಿದ್ದಾರೆ ಅದರ ಪರಿಣಾಮ ಈ ಸಂಕಲನದ ಕಥೆಗಳಲ್ಲಿ ಢಾಳಾಗಿ ಕಾಣಿಸುತ್ತದೆ. ಒಂದೊಂದು ಕಥೆಯನ್ನು ಓದಿ ಮುಗಿಸಿದಾಗಲೂ ಇಂಥದೇ ಪ್ರಸಂಗ ಅಲ್ಲೆಲ್ಲೋ ನಡೆದಿತ್ತಲ್ಲವಾ ಎಂದು ಯೋಚಿಸುವಂತಾಗುತ್ತದೆ. ಹತ್ತು ಕಥೆಗಳ ಈ ಸಂಕಲನದಲ್ಲಿ ಮನುಷ್ಯನ ಅಹಮಿಕೆ, ಅನುಮಾನ, ದರ್ಪ, ಅಸಹಾಯಕತೆ, ತಣ್ಣಗಿನ ಕ್ರೌರ್ಯ, ತಲೆಮಾರು ಕಳೆದರೂ ತಣಿಯದ ದ್ವೇಷ, ಮತ್ತೊಬ್ಬರ ಏಳಿಗೆಯನ್ನು ಕಂಡಾಗ ಇದ್ದಕ್ಕಿದ್ದಂತೆ ಉಂಟಾಗುವ ಅಸಹನೆ, ಪದೇ ಪದೇ ಸುಳ್ಳಾಗಿ ಹೋಗುವ ನಿರೀಕ್ಷೆಗಳು, ಯಾರಿಗೂ ಕಾಯದೆ ಹೋಗಿ ಬಿಡುವ ಪ್ರಾಣ. ಹೀಗೆ ಮನುಷ್ಯನ ಮಿತಿಗಳಿಗೆ ಪುರಾವೆ ಒದಗಿಸುವ ಪ್ರಸಂಗಗಳು ಎಲ್ಲಾ ಕಡೆಗಳಲ್ಲೂ ಬರುತ್ತವೆ. ಪ್ರತಿಯೊಂದು ಕಥೆಯೂ ತನ್ನದೇ ರೀತಿಯಲ್ಲಿ ಮುಗಿದು ಲೈಫು ಇಷ್ಟೇನೇ! ಎಂದು ಪಿಸುಗುಟ್ಟಿದಂತೆ ಭಾಸವಾಗುತ್ತದೆ ಎಂದು ಮಣಿಕಾಂತ್ ಎ.ಆರ್. ಬೆನ್ನುಡಿಯಲ್ಲಿ ಬರೆದಿದ್ದಾರೆ.

ವಿನಾಯಕ ಅರಳಸುರಳಿಯವರ ಮರ ಹತ್ತದ ಮೀನು ಕಥಾಸಂಕಲನವು ಹತ್ತು ಕಥೆಗಳು ಓದುಗರ ಮನದಾಳಕ್ಕಿಳಿಯುವ, ಭಾವನೆಗಳನ್ನು ಕೆದಕಿ, ಕಣ್ಣಂಚಿನಲ್ಲಿ ತೇವವನ್ನು ತಂದಿಡುವ ಕೃತಿ. ಈ ಕಥೆಗಳು ಬದುಕಿನ ಕಠಿಣ ಸತ್ಯಗಳನ್ನು ಒಡ್ಡುವ ಕನ್ನಡಿಯಾಗಿವೆ ಒಮ್ಮೆ ಓದಿದರೆ ಮನಸ್ಸಿನಿಂದ ಮಾಸದಂತಿಲ್ಲ. ಹಿಂದೆ ನವಿಲುಗರಿ ಮರಿಹಾಕಿತು ಓದಿದಾಗ ಉಂಟಾದ ಭಾವತೀವ್ರತೆ, ಈ ಪುಸ್ತಕದಲ್ಲಿಯೂ ಮತ್ತೆ ಕಾಣಿಸಿತು. ಈ ಕಥೆಗಳು ನಮ್ಮ ಸುತ್ತಮುತ್ತಲಿನ ಜೀವನದ ಕ್ಷಣಗಳನ್ನೇ ತೋರಿಸುತ್ತವೆ. ಒಂದಿನಿತೂ ಉತ್ಪ್ರೇಕ್ಷೆಯಿಲ್ಲದ, ಬೇಡವೆನಿಸುವ ವಿವರಣೆಯಿಲ್ಲದ ಕಥೆಗಳಿವು; ಎಲ್ಲವೂ ಜೀವನದ ನೇರ ಚಿತ್ರಣ.

ಗೋಪಿಯ ಅಜ್ಜಿ ಕಥೆಯಲ್ಲಿ ಇಳಿವಯಸ್ಸಿನವರಿಗೆ ಮಕ್ಕಳಿಂದ ದೊರಕದ ಆಸರೆಯ ಕೊರತೆಯನ್ನು, ಅಜ್ಜಿ-ಮೊಮ್ಮಗನ ಸೂಕ್ಷ್ಮ ಬಾಂಧವ್ಯದೊಂದಿಗೆ ಚಿತ್ರಿಸಲಾಗಿದೆ. ಮರ ಹತ್ತದ ಮೀನು ಶೀರ್ಷಿಕೆಯ ಕಥೆಯಲ್ಲಿ ಸಾಮರ್ಥ್ಯವಿದ್ದರೂ ಕೆಲಸದ ಜಾಗದಲ್ಲಿ ಕಡೆಗಣನೆಗೊಳಗಾಗುವ ವ್ಯಕ್ತಿಯೊಬ್ಬನ ಒಳಗಿನ ಹೋರಾಟವನ್ನು ಗಾಢವಾಗಿ ಬಿಡಿಸಲಾಗಿದೆ. ಕೆಂಪು ಕುಂಕುಮ - ಕಪ್ಪು ಕುಂಕುಮ ಕಥೆಯ ಅಲೆಮಾರಿಯೊಬ್ಬನ ಜೀವನದ ಏಕಾಂಗಿತನ, ಆನಾನು ಮನೇಲಿದ್ರೂ ಒಂದೇ, ಸಮಾಧಿಯಲ್ಲಿದ್ರೂ ಒಂದೇಟಿ ಎಂಬ ಮಾತಿನೊಂದಿಗೆ ಹೃದಯಕ್ಕೆ ಚುಚ್ಚುವಂತೆ ಮೂಡಿಬಂದಿದೆ.

ಚಿಕಿತ್ಸೆ ಕಥೆಯು ಅಹಂಕಾರದಿಂದ ಕೂಡಿದ ಮನುಷ್ಯನೊಬ್ಬನ ಮನಸ್ಸಿನ ಪರಿವರ್ತನೆಯನ್ನು ತೋರಿಸುತ್ತದೆ. ಭೂಮಿಯಲ್ಲಿ ತಾಯಿಯ ಬದುಕಿಗಾಗಿ ತನ್ನ ಮನಸ್ಥಿತಿಗೆ ವಿರುದ್ಧವಾದ ವ್ಯಕ್ತಿಯನ್ನು ವರಿಸಲು ಹೊರಟ ಹುಡುಗಿಯ ಕಥೆಯಿದೆ. ನೆಲೆ ಊರಿನ ಮತ್ತು ಪೇಟೆಯ ಒಡಲಾಟದಲ್ಲಿ ಸಿಕ್ಕಿಕೊಂಡವನ ಕತೆಯಾದರೆ, ಸ್ವಯಂ ಕಥೆಯು ಒಂದೇ ಒಂದು ಋಣಾತ್ಮಕ ಭಾವನೆಯಿಂದ ಬದುಕು ಹಾಳಾಗುವುದನ್ನು ಚಿತ್ರಿಸುತ್ತದೆ. ಸಕಲ ಕಲಾ ವಲ್ಲಭ ಕನಕದಾಸರ ಆಎಲ್ಲರೂ ಮಾಡುವುದು ಹೊಟ್ಟೆಗಾಗಿಟಿ ಎಂಬ ಸಾಲಿನಂತೆ ಬದುಕಿನ ಸತ್ಯವನ್ನು ಎತ್ತಿಹೇಳುತ್ತದೆ. ಒಣ ಮರದ ಹಸಿರೆಲೆಯಲ್ಲಿ ತಂದೆಗೆ ಮಗನೇ ತಾಯಿಯಾಗುವ ಭಾವುಕ ಕಥನವಿದೆ. ಈ ಕಥೆ ಓದುವಾಗ ಕಣ್ಣೀರು ತಡೆಯಲಾಗದು. ಕೊನೆಯ ಕಥೆ ಗೋಡೆ ತಲೆಮಾರುಗಳಿಗೂ ಮೀರಿದ ದ್ವೇಷದ ಕಾಯಿಲೆಯನ್ನು ತೆರೆದಿಡುತ್ತದೆ.

ವಿನಾಯಕರ ಭಾಷೆಯ ಬಳಕೆಯ ಸೂಕ್ಷ್ಮತೆ, ಸನ್ನಿವೇಶಕ್ಕೆ ತಕ್ಕಂತೆ ಶಬ್ದಗಳನ್ನು ಜೋಡಿಸುವ ಕೌಶಲ, ಕಥಾಪಾತ್ರಗಳ ಜೀವಂತಿಕೆಇವೆಲ್ಲವೂ ಓದುಗರನ್ನು ಕಥೆಯೊಳಗೆ ಎಳೆದುಕೊಂಡು ಬಿಡುತ್ತವೆ. ಈ ಕಥೆಗಳು ಲೇಖಕರ ಸ್ವಂತ ಅನುಭವದಿಂದ ರೂಪಗೊಂಡಿರಬೇಕು ಎನಿಸುತ್ತದೆ; ಇಲ್ಲವಾದರೆ ಇಂತಹ ಭಾವತೀವ್ರತೆಯ ಕಥನ ಸಾಧ್ಯವೇ? ವೈವಿಧ್ಯಮಯ ಕಥಾವಸ್ತು, ಗಾಢವಾದ ಚಿತ್ರಣ, ಮನಕಾಡುವ ಪಾತ್ರಗಳುಮರ ಹತ್ತದ ಮೀನು ಓದುಗರಿಗೆ ಒಂದು ಭಾವನಾತ್ಮಕ ಪಯಣವನ್ನೇ ಉಣಬಡಿಸುತ್ತದೆ. 150 ಪುಟಗಳ ಈ ಪುಟ್ಟ ಸಂಕಲನವು ಉತ್ತಮ ಕಥೆಗಳನ್ನು ಓದಲು ಬಯಸುವವರಿಗೆ ಇಷ್ಟವಾದೀತು.




ಪುಸ್ತಕದ ಲೇಖಕ/ಕವಿಯ ಹೆಸರು

ವಿನಾಯಕ ಅರಳಸುರಳಿ

ಪ್ರಕಾಶಕರು

ಸಾಹಿತ್ಯಲೋಕ ಪಬ್ಲಿಕೇಷನ್ಸ್, ರಾಜಾಜಿ ನಗರ, ಬೆಂಗಳೂರು-560010, ಮೊ: 9945939436

ಪುಸ್ತಕದ ಬೆಲೆ ರೂ. 165.00, ಮುದ್ರಣ: 2022

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248